
ಕನ್ನಡ ರಾಜ್ಯೋತ್ಸವ ಸರಣಿ
ಕರ್ನಾಟಕದ ವಿಜ್ಞಾನಿಗಳು

೧೫



ಸಾಹಿತ್ಯದ ಹೂರಣದೊಡನೆ ವಿಜ್ಞಾನದ ಸವಿ ಬೆರೆಸಿ ಉಣಿಸುವ ಡಾ.ಟಿ. ಆರ್. ಅನಂತರಾಮು

ಡಾ. ಟಿ. ಆರ್. ಅನಂತರಾಮು ಒಬ್ಬ ಭೂವಿಜ್ಞಾನಿ. ಭೂವಿಜ್ಞಾನಿಗಳಿಗೂ ಕನ್ನಡ ಸಾಹಿತ್ಯಕ್ಕೂ ಏನೋ ಆಗಾಧ ನೆಂಟಿದೆ ಎಂದು ನನ್ನ ಭಾವನೆ. ಪ್ರಸಿದ್ಧ ಕವಿ ನಾಡೋಜ ನಿಸಾರ್ ಅಹಮದ್ ಹಾಗೂ ನಮ್ಮ ವೇದಿಕೆಯ ಸದಸ್ಯರಾಗಿದ್ದು ಇತ್ತೀಚೆಗೆ ನಮ್ಮನ್ನಗಲಿದ ಡಾ. ಸೀತಾರಾಮು ಅವರೂ ಭೂವಿಜ್ಞಾನಿಗಳೇ. ಇವರೆಲ್ಲರೂ ತಮ್ಮ ಕ್ಷೇತ್ರದಲ್ಲಿ ಪಾರಂಗತರಾಗಿದ್ದರ ಜೊತೆಗೆ ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡಿದ್ದಾರೆ. ಕನ್ನಡ ವಿಜ್ಞಾನ ಸಾಹಿತ್ಯ ಓದುಗರಿಗೆ ಚಿರಪರಿಚಿತರಾಗಿರುವ ಅನಂತರಾಮುರವರು ಅಸಮಾನ್ಯ ಲೇಖಕ.

ಅಪ್ಪಟ ಕನ್ನಡಿಗರಾದ ಅನಂತರಾಮುರವರು ಜನಿಸಿದ್ದು ಆಗಸ್ಟ್ ೩, ೧೯೪೯ರಂದು ಇವರ ಹುಟ್ಟೂರು ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ತಾಳಗುಂದ. ಸುಸಂಸ್ಕೃತರಾದ ತಂದೆ ರಾಮಣ್ಣನವರು ಮತ್ತು ತಾಯಿ ವೆಂಕಟಲಕ್ಷಮ್ಮನವರು ವಿದ್ಯಾವಂತರು ಕೂಡ. ಇವರೇ ಅನಂತರಾಮುರವರಿಗೆ ಆದರ್ಶ ವ್ಯಕ್ತಿಗಳಾಗಿದ್ದರು. ಶಿರಾದಲ್ಲಿಯೇ ಶಾಲಾ ವಿದ್ಯಾಭ್ಯಾಸ ಮಾಡಿದ ನಂತರ ತುಮಕೂರಿನ ಸರ್ಕಾರಿ ಕಾಲೇಜಿನಿಂದ ೧೯೭೦ನೆಯ ಸಾಲಿನಲ್ಲಿ ಪದವಿ ಪಡೆದರು. ಮೈಸೂರು

ವಿಶ್ವವಿದ್ಯಾಲಯದಿಂದ ಭೂವಿಜ್ಞಾನದಲ್ಲಿ ೧೯೭೨ರಲ್ಲಿ ಎಂ.ಎಸ್ಸಿ ಪದವಿ ಗಳಿಸಿದರು.

ಮುಂದೆ ಬೆಂಗಳೂರಿನ ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಮತ್ತು ಸುರತ್ಕಲ್‌ನ ರೀಜಿನಲ್ ಇಂಜನಿಯರಿಂಗ್ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ೧೯೭೭ರಿಂದ ನಿವೃತ್ತಿಯವರೆಗೆ ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣ ಸಂಸ್ಥೆಯಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಇವರು ಕನ್ನಡ ನಾಡಿನ ಭೂಮಿಯ ಸಮೀಕ್ಷೆ ನಡೆಸಿ ಚಿನ್ನದ ನಿಕ್ಷೇಪಗಳಿಗಾಗಿ ಶೋಧನೆ ನಡೆಸುತ್ತಿದ್ದಾಗ, ಕನ್ನಡ ಸರಸ್ವತಿ ಇಂತಹ ಚಿನ್ನದ ಲೇಖಕನನ್ನು ರೂಪಿಸಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿದ್ದಾಳೆ.

ಇವರು ತಮ್ಮ ವೃತ್ತಿಯಲ್ಲಿ ಸಾಧಿಸಿದ್ದೇನೆಂದು ಮೊದಲು ತಿಳಿದುಕೊಳ್ಳೋಣ. ಕೋಲಾರ ಗೋಲ್ಡ್ ಫೀಲ್ಡ್ಸ್ ಗಣಿಯೊಳಗೆ ಇಳಿಯುವುದು ಸಾಹಸದ ಕೆಲಸವೇ. ಆದರೆ ಅಲ್ಲಿ ಉದ್ಯೋಗಸ್ಥರಾಗಿದ್ದ ಅನಂತರಾಮುರವರು ಮೂರು ಕಿಲೋಮೀಟರ್ ಆಳಕ್ಕೂ ಹೆಚ್ಚು ದೂರ ಇಳಿದು, ೭೯ ಡಿಗ್ರಿ ತಾಪಮಾನದಲ್ಲಿ ಸಂಶೋಧನೆಗಳನ್ನು ಕೈಗೊಂಡಿದ್ದಾರೆ. ಮೇಘಾಲಯದ ಬೆಟ್ಟ ಹಾಗೂ ಕಣಿವೆಗಳಲ್ಲಿಯೂ ಸಮೀಕ್ಷೆ ನಡೆಸಿದ್ದಾರೆ. ಮಲೆ ಮಹದೇಶ್ವರ ಬೆಟ್ಟ ಪ್ರದೇಶದ ದುರ್ಗಮ ಕಾಡುಗಳಲ್ಲಿ ಸಮೀಕ್ಷೆ ನಡೆಸಿ, ಅಲ್ಲಿನ ಶಿಲಾನಿಕ್ಷೇಪಗಳ ನಕ್ಷೆ ಸಿದ್ಧಪಡಿಸಿದವರಲ್ಲಿ ಇವರೇ ಮೊದಲಿಗರು. ಜಿಲ್ಲಾ ಸಂಪನ್ಮೂಲಗಳಾದ ನೀರು, ಮಣ್ಣು, ಅರಣ್ಯ, ಖನಿಜ ನಿಕ್ಷೇಪಗಳು ಇತ್ಯಾದಿಗಳ ಬಗ್ಗೆ ಜಿಲ್ಲಾ ಸಂಪನ್ಮೂಲ ನಕ್ಷೆಯನ್ನು ಸಿದ್ಧಪಡಿಸುವ ವ್ಯವಸ್ಥೆಯನ್ನು ಜಾರಿಗೆ ತಂದಿದ್ದಾರೆ.

ಮತ್ತೊಂದು ವಿಷಯವೆಂದರೆ ಭೂವೈಜ್ಞಾನಿಕ ಸಂಸ್ಥೆಯ ೧೫೦ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಇವರು ಸಂಪಾದಿಸಿರುವ 'ನ್ಯಾಷನಲ್ ಜಿಯಲಾಜಿಕಲ್ ಮಾನ್ಯುಮೆಂಟ್' ಅತಿ ವಿಶಿಷ್ಟವಾದ, ಬಹಳ ಕಾಲದವರೆಗೆ ಹಲವಾರು ಸಂಶೋಧನೆಗಳಿಗೆ ಉಪಯುಕ್ತವಾದ ಕೃತಿ ಎನ್ನುವ ಮನ್ನಣೆಗೆ ಪಾತ್ರವಾಗಿದೆ. ಕರ್ನಾಟಕದ ಮರಡಿಹಳ್ಳಿಯಲ್ಲಿರುವ ದಿಂಬುಲಾವ, ಲಾಲ್‌ಬಾಗಿನ ಬೆಟ್ಟ, ಮಂಗಳೂರಿನ ಸೇಂಟ್ ಮೇರಿ ದ್ವೀಪದ ಶಿಲಾಕಂಬಗಳು ಹಾಗೂ ಕೆ.ಜಿ.ಎಫ್ ನಲ್ಲಿರುವ ಜ್ವಾಲಾಮುಖಿಯ ಕಲ್ಲುಗಳ ಬಗ್ಗೆ ಮಹತ್ವದ ದಾಖಲೆಗಳನ್ನು ಒಳಗೊಂಡಿದೆ.

ಹೀಗೆ ಯಾವುದೇ ಕೆಲಸದಲ್ಲಾದರೂ ಶಿಸ್ತುಬದ್ಧರಾಗಿ ಕೆಲಸವನ್ನು ಮಾಡುವ ಟಿ.ಆರ್. ಅನಂತರಾಮುರವರನ್ನು ನಾನು ವೈಯಕ್ತಿಕವಾಗಿ ಬಲ್ಲೆ. ಕುವೆಂಪು

ಭಾಷಾ ಭಾರತಿಯಲ್ಲಿ ಜೆ.ಡಿ.ಬರ್ನಾಲ್‌ರ 'Science in History' ಪುಸ್ತಕದ ನಾಲ್ಕು ಸಂಪುಟಗಳನ್ನು ಅನುವಾದ ಮಾಡಿದವರಲ್ಲಿ ನಾನೂ ಒಬ್ಬಳಾಗಿದ್ದೆ. ಮುಖ್ಯ ಸಂಪಾದಕರಾಗಿದ್ದ ಅನಂತರಾಮುರವರ ಶಿಸ್ತು ಬದ್ಧತೆಗಳನ್ನು ಕಂಡು ಬೆರಗಾದೆ. ಇವರ ಮಾರ್ಗದರ್ಶನದಲ್ಲಿ ಬಹಳಷ್ಟು ಕಲಿತಿದ್ದೇನೆ.

ಮೊದಲೇ ಹೇಳಿರುವಂತೆ ಅನಂತರಾಮುರವರು ವಿಜ್ಞಾನ ಲೇಖಕ, ಸಂಪಾದಕ ಹಾಗೂ ಜನಪ್ರಿಯ ಅಂಕಣಕಾರರು. ಕನ್ನಡ ವಿಜ್ಞಾನ ಸಾಹಿತ್ಯ ಓದುಗರಿಗೆ ಚಿರಪರಿಚಿತರು. ಇವರು ಅಧ್ಯಯನ ಮಾಡಿದ್ದು ಭೂವಿಜ್ಞಾನವಾದರೂ ಇವರ ಬರಹಗಳು ಎಂದೂ ಭೂವಿಜ್ಞಾನಕ್ಕೆ ಮಾತ್ರ ಸೀಮಿತವಾಗಿಲ್ಲ. ಇವರು ವಿವಿಧ ವಿಜ್ಞಾನದ ವಿಷಯಗಳ ಬಗ್ಗೆ ಸರಳವಾಗಿ, ಸ್ವಾರಸ್ಯವಾಗಿ ಬರೆಯುವ ಸಾಮರ್ಥ್ಯ ಗಳಿಸಿದ್ದಾರೆ. ವಿವಿಧ ಮಾಧ್ಯಮಗಳ ಮೂಲಕ ವಿಜ್ಞಾನವನ್ನು ಜನಪ್ರಿಯಗೊಳಿಸುವ ಕೆಲಸದಲ್ಲಿ ಹಲವು ದಶಕಗಳಿಂದ ತೊಡಗಿದ್ದಾರೆ. ಇವರ ಲೇಖನಗಳು ಕಸ್ತೂರಿ, ತರಂಗ ಮುಂತಾದ ಪತ್ರಿಕೆಗಳ ಮೂಲಕ ಜನ ಸಾಮಾನ್ಯರಿಗೂ ತಲುಪುತ್ತಿವೆ. ಆಕಾಶವಾಣಿ, ದೂರದರ್ಶನಗಳ ಮೂಲಕವೂ ವೈಜ್ಞಾನಿಕ ಮಾಹಿತಿಗಳನ್ನು ಜನರಿಗೆ ತಲುಪಿಸುತ್ತಿರುವ ಅನಂತರಾಮುರವರು ವಿಜ್ಞಾನ ಗೋಷ್ಠಿಗಳಲ್ಲಿ ವಿದ್ವತ್ಪೂರ್ಣ ಉಪನ್ಯಾಸಗಳನ್ನು ನೀಡುವುದರಲ್ಲಿಯೂ ಸಿದ್ಧಹಸ್ತರು. ಕನ್ನಡ ವಿಜ್ಞಾನ ಸಾಹಿತ್ಯದ ದಿಗ್ಗಜ ಪ್ರೊ.ಜಿ.ಟಿ.ನಾರಾಯಣರಾವ್ ಅವರು ಬಹಳ ಮುಂಚೆಯೇ ಇವರನ್ನು ಗುರುತಿಸಿದ್ದರು ಹಾಗೂ ಅನಂತರಾಮುರವರ ಬರಹವನ್ನು ಬಹುವಾಗಿ ಮೆಚ್ಚುತ್ತಿದ್ದರು. ಮತ್ತೊಬ್ಬ ವಿಜ್ಞಾನ ಸಾಹಿತಿ ಡಾ.ಎಚ್.ಆರ್. ಕೃಷ್ಣಮೂರ್ತಿಯವರೂ ಅನಂತರಾಮುರವರ ಬಗ್ಗೆ "ಕನ್ನಡದ ಜನಪ್ರಿಯ ವಿಜ್ಞಾನ ಪತ್ರಿಕೆಯು ಹೇಗಿರಬೇಕೆನ್ನುವ 'ಬೆಂಚ್ ಮಾರ್ಕ್' ಅನ್ನು ವಿಜ್ಞಾನ ಸಂಗಾತಿ ಪತ್ರಿಕೆಯ ಮೂಲಕ ತೋರಿಸಿಕೊಟ್ಟಿದ್ದಾರೆ" ಎಂದು ಹೊಗಳಿದ್ದಾರೆ.

ವಿಜ್ಞಾನ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಲೀಲಾಜಾಲವಾಗಿ ಬರೆದು, ತಮ್ಮ ಕೊಡುಗೆಗಳನ್ನು ನೀಡಿರುವ ಶ್ರೀಯುತರು ವಿಸ್ಮಯ ವಿಜ್ಞಾನ ಮಾಲಿಕೆಯಲ್ಲಿ ಕೃತಿಗಳ ಸಂಪಾದನೆ ಮಾಡಿದ್ದಾರೆ. ಸಾಕ್ಷ್ಯಚಿತ್ರಗಳಿಗೆ ಸಾಹಿತ್ಯ ಒದಗಿಸಿದ್ದಾರೆ. ಜ್ಞಾನ-ವಿಜ್ಞಾನ ವಿಶ್ವಕೋಶ, ಕನ್ನಡ ವಿಶ್ವಕೋಶ, ಕರ್ನಾಟಕ ಕೋಶ, ಕಿರಿಯರ ಕರ್ನಾಟಕ ಮುಂತಾದ ವಿಶ್ವಕೋಶಗಳಿಗೆ ಲೇಖನಗಳನ್ನು ಬರೆದಿದ್ದಾರೆ. ಅನೇಕ ಪದ ವಿವರಣಾ ಕೋಶಗಳ ಸಂಪಾದಕತ್ವವನ್ನು ಸಮರ್ಪಕವಾಗಿ ಮಾಡಿದ್ದಾರೆ.

ವಿಜ್ಞಾನವನ್ನು ಸರಳವಾಗಿ ಆದರೆ ಸಾರಗೆಡದಂತೆ ಬರೆಯುವುದು ಇವರ ವೈಶಿಷ್ಟ್ಯ. ಸಾಹಿತ್ಯದಂತೆಯೇ ವಿಜ್ಞಾನ ಕೃತಿಗಳನ್ನೂ ಓದುವಂತೆ ಮಾಡಲು ಇವರು ಆಕರ್ಷಕ ಶೈಲಿಯನ್ನು ಬಳಸುತ್ತಾರೆ. ಇವರ ನಿರೂಪಣಾ ತಂತ್ರ ಓದುಗರ ಮೆಚ್ಚುಗೆ ಗಳಿಸಿದೆ. ಇವರ ಶೈಲಿಯನ್ನು ಮೆಚ್ಚಿರುವ ಮತ್ತೊಬ್ಬ ವಿಜ್ಞಾನ ಸಾಹಿತಿ ಪ್ರೊ. ಎಚ್.ಆರ್. ರಾಮಕೃಷ್ಣರಾವ್ ಇವರ ಬಗ್ಗೆ ಹೇಳುತ್ತಾ –ಕನ್ನಡದಲ್ಲಿ ಅನೇಕ ದಶಕಗಳಿಂದ ಶ್ರೇಷ್ಠ ವೈಜ್ಞಾನಿಕ ಕೃತಿಗಳನ್ನು ರಚಿಸಿರುವ ಶ್ರೀ.ಟಿ.ಆರ್. ಅನಂತರಾಮು. ...ಕನ್ನಡ ಸಾರಸ್ವತ ಲೋಕದಲ್ಲಿ, ವಿಜ್ಞಾನ ಸಾಹಿತ್ಯದಲ್ಲಿ "ಟಿಆರ್‌ಎ' ಒಂದು `ಬ್ರಾಂಡ್ ನೇಮ್'-ಇಂಗ್ಲೆಂಡಿನಲ್ಲಿ ಅಸಿಮೋವ್ ಇದ್ದಂತೆ- ಎಂದು ಅಭಿಮಾನ ಪಡುತ್ತಾರೆ. ದೂರದರ್ಶಕ ಕಂಡ ವಿಶ್ವರೂಪ ಕೃತಿಯ ಮುನ್ನುಡಿಯಲ್ಲಿ ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ರಚನೆಗೆ ಸಮರ್ಥವಾದ ಭಾಷಾಶೈಲಿ ಇನ್ನೂ ರೂಪಗೊಂಡಿಲ್ಲ ಎಂದು ಮರಗುವವರ ಕಣ್ಣು ತೆರೆಸುವ ಕೃತಿ ಇದಾಗಿದೆ' ಎಂದು ಕನ್ನಡವನ್ನು ಬೀಳಾಗಿ ಕಾಣುವ ಕನ್ನಡಿಗರಿಗೆ ಎಚ್ಚರಿಕೆ ನೀಡಿದ್ದಾರೆ. ಇಷ್ಟೆಲ್ಲಾ ಪ್ರಶಂಸೆಗಳಿಗೆ ಭಾಜನರಾಗಿರುವ ಅನಂತರಾಮುರವರ ಪುಸ್ತಕದ ಪಟ್ಟಿ ದೊಡ್ಡದಾಗಿದೆ. ಒಟ್ಟು ಪ್ರಕಟಣೆಗಳು ೨೦೨೧ರ ವರೆಗೆ ೧೧೮! ಇದರಲ್ಲಿ ಸಂಪಾದಿತ ಕೃತಿಗಳೂ ಸೇರಿವೆ. ಸ್ವಂತ ರಚನೆಗಳು ೫೯, ಅನುವಾದಿತ ೧೩.

ಇವರ ಪುಸ್ತಕಗಳ ಶೀರ್ಷಿಕೆಗಳೇ ಅತ್ಯಾಕರ್ಷಕವಾಗಿ ಓದುಗರ ಗಮನ ಸೆಳೆಯುತ್ತವೆ. ೩೯ ಕೃತಿಗಳ ಪಟ್ಟಿಯಲ್ಲಿ ಇಂತಹ ಶೀರ್ಷಿಕೆಗಳುಳ್ಳ ಕೃತಿಗಳೆಂದರೆ ಹಿಮದ ಸಾಮ್ರಾಜ್ಯದಲ್ಲಿ, ರಾಜರ ಲೋಹ-ಲೋಹಗಳ ರಾಜ ಚಿನ್ನ, ಬೆಳೆಯುತ್ತಿರುವ ಹಿಮಾಲಯ, ಪೆಡಂಭೂತಗಳು ಅಳಿದವೇಕೆ?, ಕಾಲಗರ್ಭಕ್ಕೆ ಕೀಲಿಕೈ, ದಣಿಯಿಲ್ಲದ ಧರಣಿ, ಬಾನಂಗಳದ ಬತ್ತಳಿಕೆಯಲ್ಲಿ, ಕರ್ತಾರನಿಗೊಂದು ಕಿವಿಮಾತು, ಕರೆಯದೇ ಬಂದ ಅತಿಥಿಗಳು ಇತ್ಯಾದಿ. ಸಾಕೇ?

ಬಹಳ ಹಿಂದೆ ನಾನು ಇವರ ಕೃತಿ 'ದೂರದರ್ಶಕ ಕಂಡ ವಿಶ್ವರೂಪ' ದ ವಿಮರ್ಶೆ ಬರೆದಿದ್ದೆ. ಆಗ ನನಗೆ ಆ ಕೃತಿಯ ಲೇಖನಗಳ ಶೀರ್ಷಿಕೆಗಳೇ ಮನ ಸೆಳೆದವು. ಅನಂತರಾಮುರವರು ನೀಡಿರುವ ಅತಿ ಸುಂದರವಾದ ಶೀರ್ಷಿಕೆಗಳನ್ನು ಹೆಣೆದು ನಾನು ಅವರ ಕೃತಿಯ ವಿಮರ್ಶೆ ಮಾಡಿದ್ದು ಹೀಗೆ.


ಭೂವಿಜ್ಞಾನಿಯೊಬ್ಬರು ಮಿಲಿಯನ್-ಬಿಲಿಯನ್-ಟ್ರಿಲಿಯನ್ ಬಗ್ಗೆ ಮಾತನಾಡುತ್ತಿರುವಂತೆಯೇ **ಆಕಾಶದೆಡೆಗೆ ಮೊಗ ಮಾಡಿ, ಬೆಳಕಿನೊಂದಿಗೆ**

ಮಾನವನಾಡಿದ ಆಟಗಳ ಬಗ್ಗೆ ತಿಳಿಸುತ್ತಾ ಅರೆ ಘಳಿಗೆ ಹಿಂದಕ್ಕೆ ಹೋದರೆ ಆಕಾಶಕಾಯಗಳು ಎಷ್ಟೆಲ್ಲಾ ಕೆಲಸಗಳನ್ನು ಸಾಧಿಸುತ್ತವೆಂದು ಆಶ್ಚರ್ಯ ಚಕಿತರಾಗಿ ಅಲ್ಲಿಯವರೆಗೂ ಸುತ್ತುತ್ತಿದ್ದ ಸೂರ್ಯನಿಗೊಂದು ನೆಲೆ (ಸೂರ್ಯನೇ ಸೌರವ್ಯೂಹದ ಕೇಂದ್ರ ಎಂಬ ವಾದ ಒಪ್ಪಿಗೆಯಾದ ಸಂದರ್ಭ) ನೀಡುತ್ತಾರೆ. ಮುಂದೆ ಸಾಗಿ ಬದಲಾದ ಬಾನ ಚಿತ್ರಣವನ್ನು ಗಮನಿಸುವುದೇ ಅಲ್ಲದೆ ಅಗೋಚರ ವಿಶ್ವದ ಅಶರೀರ ವಾಣಿಯನ್ನೂ ಆಲಿಸುತ್ತಾರೆ. ಅಷ್ಟರಲ್ಲಿ ವಿಶ್ವ ವೀಕ್ಷಣೆಗೆ ದಿವ್ಯನೇತ್ರವನ್ನು ಪಡೆದುಕೊಂಡು ವಿರಾಟ್ ಸ್ವರೂಪವನ್ನು ನೋಡಿ ಆನಂದಿಸಿ 'ಚಂದ್ರ' ಕಂಡ ವಿಶ್ವವನ್ನೂ ಓದುಗರಿಗೂ ಪರಿಚಯಿಸುತ್ತಾರೆ. ಇದ್ದಕ್ಕಿದ್ದಂತೆಯೇ ಕೋಟಿ ಸೂರ್ಯ ಸಮಪ್ರಭೆಯ ಬೆಳಕು ಓದುಗರನ್ನು ಜಾಗೃತಗೊಳಿಸುತ್ತದೆ. ವಿಜ್ಞಾನಿಗಳ ಹುಡುಕಾಟ ಎಂದಿಗೂ ನಿಲ್ಲುವಂತಹುದಲ್ಲ. ಮತ್ತಷ್ಟು ಶಕ್ತಿಯುತವಾದ ದೂರದರ್ಶಕಗಳು, ತಾಂತ್ರಿಕ ಸೌಲಭ್ಯಗಳು, ಉಪಗ್ರಹಗಳು, ಕಂಪ್ಯೂಟರ್ಗಳು ದೊರಕಿದಾಗ ತಾರೆಗಳ ತೊಟ್ಟಿಲಲ್ಲಿ ಬಗ್ಗಿ ನೋಡಿ ಆನಂದಿಸುವ ಕಾರ್ಯ ಆರಂಭವಾಗುತ್ತದೆ. ಮಹಾಸ್ಫೋಟ-ವಿಶ್ವ ಹುಟ್ಟಿದ ಘಳಿಗೆ, ನಕ್ಷತ್ರಗಳ ವಿಕಾಸ, ಅವಸಾನ ಮತ್ತು ಗೋರಿ ಎಲ್ಲವನ್ನೂ ವಿಶ್ಲೇಷಣೆ ಮಾಡಿ, ಅಂತಿಮವಾಗಿ ಹವಾಯಿ ದ್ವೀಪದಲ್ಲಿ ನಿಷ್ಕ್ರಿಯವಾಗಿರುವ ಜ್ವಾಲಾಮುಖಿಯ ತುತ್ತತುದಿಯಲ್ಲಿರುವ ಕೆಕ್ ವೀಕ್ಷಣಾಲಯದ ಭೂತಕಾಲಕ್ಕೊಯ್ಯುವ ಭವಿಷ್ಯದ ಕನ್ನಡಿಗಳು -ದೂರದರ್ಶಕಗಳು - ಹಿಂದೆ ಸಂಭವಿಸಿರುವ ಅನೇಕ ಖಗೋಳ ಸಂಗತಿಗಳ ಬಗ್ಗೆ ವಿಜ್ಞಾನಿಗಳಿಗೆ ವಿವರಣೆ ನೀಡಲು ಹೇಗೆ ಸಹಾಯಕವಾಗಿವೆ ಎಂದು ತಿಳಿಸುತ್ತಾರೆ. (ಮೇಲಿನ ಪ್ಯಾರಾಗ್ರಾಫ್‌ನ ಬಣ್ಣದ ಬರಹಗಳು ಲೇಖನಗಳ ಶೀರ್ಷಿಕೆಗಳು). ಅನಂತರಾಮುರವರೂ ಇದನ್ನು ಮೆಚ್ಚಿಕೊಂಡಿದ್ದರು.


ಒಬ್ಬ ಯಶಸ್ವಿ ಪುರುಷನ ಹಿಂದೆ ಒಬ್ಬ ಮಹಿಳೆ ಇರುತ್ತಾಳೆ ಎನ್ನುವ ಮಾತಿನಂತೆ ಅನಂತರಾಮುರವರ ಬರಹಗಳನ್ನು ಬೆರಳಚ್ಚಿಸಿ, ಅಂತಿಮ ರೂಪ ಕೊಟ್ಟು ಅಚ್ಚುಕಟ್ಟಾಗಿ ಪ್ರಕಟಣೆಗೆ ತಯಾರಿಸುವುದು ಅವರ ಪತ್ನಿ ಅನ್ನಪೂರ್ಣ ಎನ್ನುವುದು ಹೆಮ್ಮೆಯ ವಿಷಯ. ಸತಿ ಪತಿಗಳ ಅನ್ಯೋನ್ಯತೆ ಮೆಚ್ಚತಕ್ಕದ್ದೇ. ಚಿಕ್ಕ ಸಂಸಾರ, ಚೊಕ್ಕ ಸಂಸಾರ ಎನ್ನುವ ನುಡಿಗಟ್ಟಿನಂತೆ ಅನಂತರಾಮುರವರಿಗೆ ಒಬ್ಬ ಮಗಳು ಮತ್ತು ಒಬ್ಬ ಮಗ ಇದ್ದಾರೆ.

ಅನಂತರಾಮುರವರಿಗೆ ಸಂದ ಪ್ರಶಸ್ತಿಗಳೂ ಹಲವಾರು. `ಭೂಕಂಪನಗಳು ಕೃತಿಗೆ ಆರ್ಯಭಟ ಪ್ರಶಸ್ತಿ. – ೧೯೯೪, `ಕಾಲಗರ್ಭಕ್ಕೆ ಕೀಲಿಕೈ` ಕೃತಿಗೆ


ಗೊರೂರು ರಾಮಸ್ವಾಮಿ ಅಯ್ಯಂಗಾರ್ ಪ್ರಶಸ್ತಿ-೨೦೦೬, ವಿಜ್ಞಾನ ಸಾಹಿತ್ಯದ ಕೊಡುಗೆಗಾಗಿ - ಮೌಲ್ಯ ಗೌರವ ಪ್ರಶಸ್ತಿ, ೨೦೦೬, ಕರ್ನಾಟಕ ಸರ್ಕಾರದ ಪರಿಸರ ಮತ್ತು ಅರಣ್ಯ ಇಲಾಖೆಯಿಂದ ೨೦೦೮ರ `ಪರಿಸರ ಪತ್ರಿಕೋದ್ಯಮ ಪ್ರಶಸ್ತಿ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ `ವಿಷನ್ ಗ್ರೂಪ್' ನಿಂದ `ಶ್ರೇಷ್ಠ ವಿಜ್ಞಾನ ಸಂವಹನಕಾರ' ಪ್ರಶಸ್ತಿ-೨೦೧೧, ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯಿಂದ `ಶ್ರೇಷ್ಠ ಲೇಖಕ ಪ್ರಶಸ್ತಿ' (೨೦೧೨-೧೩). ಕೃತಿ:`ದೈತ್ಯ ಪ್ರತಿಭೆಗಳ ಹೆಗಲ ಮೇಲೆ', ಕರ್ನಾಟಕ ಸರ್ಕಾರದ `ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅನುವಾದ ಪುರಸ್ಕಾರ-೨೦೧೧ (`ರಾಕೆಟ್'), ಜನಪ್ರಿಯ ವಿಜ್ಞಾನ ಸಾಹಿತ್ಯಕ್ಕೆ ಕೊಡುಗೆಯನ್ನು ಪರಿಗಣಿಸಿ ತುಮಕೂರು ವಿಶ್ವವಿದ್ಯಾನಿಲಯದ 'ಗೌರವ ಡಾಕ್ಟರೇಟ್'- ೨೦೧೪, ಶಿವಮೊಗ್ಗ ಕರ್ನಾಟಕ ಸಂಘದಿಂದ ಜೀವಮಾನ ಸಾಧನೆಗಾಗಿ '`ಡಾ. ಶಿವರಾಮ ಕಾರಂತ ವಿಜ್ಞಾನ ಪ್ರಶಸ್ತಿ'- ೨೦೧೭, ವಿ.ಸಿ. ಸಂಪದದಿಂದ ಜೀವಮಾನ ಸಾಧನೆಗಾಗಿ ಗೌರವಾರ್ಪಣೆ–೨೦೧೮, ವಿಜ್ಞಾನ ಶಿಕ್ಷಕರಿಗೆ, ಸಂವಹಕರಿಗೆ ಕರ್ನಾಟಕ ಸರ್ಕಾರದ ವಾರ್ಷಿಕ ಪ್ರಶಸ್ತಿ,



ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ೧೯೮೫ರ ಅತ್ಯುತ್ತಮ ವಿಜ್ಞಾನ ಕೃತಿ ಪ್ರಶಸ್ತಿ-(ಹಿಮದ ಸಾಮ್ರಾಜ್ಯದಲ್ಲಿ) ೨೦೦೩ರ ಅತ್ತುತ್ತಮ ವಿಜ್ಞಾನ ಕೃತಿ ಪ್ರಶಸ್ತಿ–(ಕರ್ತಾರನಿಗೊಂದು ಕಿವಿಮಾತು'), ೨೦೦೮ರ ಅತ್ಯುತ್ತಮ ಪ್ರವಾಸ ಸಾಹಿತ್ಯ ಕೃತಿ ಪ್ರಶಸ್ತಿ–(ಪಶ್ಚಿಮ ಮುಖಿ)



ಡಾ.ಅನಂತರಾಮು ಮತ್ತು ಕೆಲವು ಸಮಾನ ಮನಸ್ಕರು ಜನವರಿ ೧೨, ೨೦೨೧ರಂದು ಸಮಾಜದಲ್ಲಿ ಅರಿವು ಮೂಡಿಸುವ ಅಭಿಲಾಷೆಯಿಂದ ಡಾ.ಟಿ.ಆರ್.ಅನಂತರಾಮು ವಿಜ್ಞಾನ ಪ್ರತಿಷ್ಠಾನ ಸಂಸ್ಥೆಯನ್ನು ಹುಟ್ಟುಹಾಕಿದ್ದಾರೆ. ಪ್ರತಿಷ್ಠಾನದ ವತಿಯಿಂದ ವಿಜ್ಞಾನ ಪ್ರಸರಣ, ಮಕ್ಕಳಿಗಾಗಿ 'ಸೂತ್ರ' ವಿಜ್ಞಾನ



ಮಾಸಪತ್ರಿಕೆಯ ಪ್ರಕಟಣೆ, ೬ನೆಯ ತರಗತಿಯಿಂದ ೧೦ನೆಯ ತರಗತಿಯ ಮಕ್ಕಳಿಗೆ ವಿಜ್ಞಾನ ಮತ್ತು ಗಣಿತದಲ್ಲಿ ಆಸಕ್ತಿ ಮೂಡಿಸುವ ಪ್ರಯತ್ನ, ಮಕ್ಕಳಿಗೆ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ ಇತ್ಯಾದಿ ಚಟುವಟಿಕೆಗಳನ್ನು ಹಮ್ಮಿಕೊಂಡಿದ್ದಾರೆ.

ಅಂದು ಗೆಲಿಲಿಯೋ ದೂರದರ್ಶಕವನ್ನು ಬಾನಿನೆಡೆಗೆ ತಿರುಗಿಸದಿದ್ದರೆ ಏನಾಗುತ್ತಿತ್ತು ಎಂಬ ಪ್ರಶ್ನೆ ಹಲವು ವಿಜ್ಞಾನಿಗಳನ್ನು ಕಾಡಿದೆ. ಆದರೆ ವೃತ್ತಿಯಿಂದ ಭೂವಿಜ್ಞಾನಿಯಾಗಿರುವ ಶ್ರೀ.ಅನಂತರಾಮುರವರು ಭೂಮಿಯ ಆಳದಲ್ಲಿಯೇ ತಮ್ಮ ದೃಷ್ಟಿಯನ್ನು ಕೇಂದ್ರೀಕರಿಸಿಕೊಂಡು ಸಂತೃಪ್ತರಾಗಿದ್ದರೆ ಜನಪ್ರಿಯ ವಿಜ್ಞಾನ ಸಾಹಿತ್ಯ ಲೋಕಕ್ಕೆ ಇಂತಹ ಅಮೂಲ್ಯವಾದ 'ಬರೆಹ ರತ್ನ' ದೊರೆಯುತ್ತಿರಲಿಲ್ಲವೆಂಬುದು ನಿರ್ವಿವಾದವಾದ ವಿಷಯ. ಎಪ್ಪತ್ತರ ಹರಯದಲ್ಲಿಯೂ ಸದಾಕಾಲ ಬರೆವಣಿಗೆಯಲ್ಲಿ ನಿರತರಾಗಿರುವ ಡಾ.ಟಿ.ಆರ್.ಅನಂತರಾಮುರವರು ವಿಜ್ಞಾನ ಸಾಹಿತ್ಯ ಲೋಕವನ್ನು ಮತ್ತಷ್ಟು ಶ್ರೀಮಂತಗೊಳಿಸಲಿ ಎಂದು ಆಶಿಸೋಣ.

ಜಿ.ವಿ.ನಿರ್ಮಲ